ದಿನಾಂಕ 28-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಜಿ.ಎ., ವಕೀಲರವರಿಂದಃ

ಕೇಸಿನ ಬಗ್ಗೆ ನಾನು ಸಂಪೂರ್ಣ ಮಾಹಿತಿ ಪಡೆದುಕೊಂಡಿರುತ್ತೇನೆ. 2 ಮತ್ತು 3 ನೇ ಪ್ರತಿವಾದಿಗಳು ನನ್ನ ಮಕ್ಕಳು, ಮುಂಬೈಯಲ್ಲಿ ವಾಸ. ಸಾಕ್ಷಿ ಮುಂಬೈಯಿಂದ ಉಡುಪಿಗೆ ಸಹ ಬಂದು, ಹೋಗಿ ಮಾಡುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ಮಗ 2 ನೇ ವಾದಿ ಜೀವಂತ ಇಲ್ಲ, ಬೆಳ್ಳಂಪಳ್ಳಿ ಮನೆಯಲ್ಲಿ ಮರಣ ಹೊಂದಿರುತ್ತಾನೆ. 5 ಮತ್ತು 6 ನೇ ಪ್ರತಿವಾದಿಗಳು ನನ್ನ ಅಕ್ಕನ ಮಕ್ಕಳು, ಪೂನಾದಲ್ಲಿ ವಾಸ. 6 ರಿಂದ 12 ನೇ ಪ್ರತಿವಾದಿಗಳು ಆಶಾ ಶೆಟ್ಟಿ ಮಕ್ಕಳು, ಅಂದರೆ 10 ನೇ ಪ್ರತಿವಾದಿ ಎಲ್ಲರೂ ಪೂನಾದಲ್ಲಿ ವಾಸ. 13 ಮತ್ತು 14 ನೇ ಪ್ರತಿವಾದಿಗಳು ಮುಂಬೈಯಲ್ಲಿ ಇರುತ್ತಾರೆ. 15 ನೇ ಪ್ರತಿವಾದಿ ನನ್ನ ಅಣ್ಣ, ಪೂನಾದಲ್ಲಿ ವಾಸ. 16 ರಿದ 20 ನೇ ಪ್ರತಿವಾದಿಗಳು ಉಡುಪಿ ಉದ್ಯಾವರದಲ್ಲಿ ವಾಸ.

16 ನೇ ಪ್ರತಿವಾದಿ ಮದುವೆ ಭೋಜ ಶೆಟ್ಟಿಯೊಂದಿಗೆ ಆಗಿದ್ದು, ಅವರುಗಳ ಮದುವೆ ಸುಮಾರು 29 ವರ್ಷಗಳ ಹಿಂದೆ ಆಗಿರುತ್ತದೆ. 16 ನೇ ಪ್ರತಿವಾದಿ ಮದುವೆ ಆದಾಗಿನಿಂದ ಆಕೆಯ ಮನೆಯಲ್ಲೇ ವಾಸ, ದಾವಾ ಸ್ವತ್ತಿನಲ್ಲಿ ಇಲ್ಲ. ಭೋಜ ಶೆಟ್ಟಿ 16 ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಂಡ ನಂತರ ಆತನೇ ಆಕೆಯ ಮನೆಗೆ ಹೋಗಿದ್ದರು. 5-6 ತರಗತಿವರೆಗೆ ವಿದ್ಯಾಭ್ಯಾಸ ಮಾಡಿ 15 ನೇ ಪ್ರತಿವಾದಿ ಪೂನಾಕ್ಕೆ ಹೋಗಿ ನೆಲೆಸಿರುತ್ತಾರೆ. 7 ನೇ ಪ್ರತಿವಾದಿಯ ಮದುವೆ 50 ವರ್ಷಗಳ ಹಿಂದೆ ಆಗಿರುತ್ತದೆ. 7 ನೇ ಪ್ರತಿವಾದಿಯ ಗಂಡನ ಊರು ಪಡ್ಡಂ, ಹಿರಿಯಡ್ಕ. ಮದುವೆ ಲಾಗಾಯ್ತು 7 ನೇ ಪ್ರತಿವಾದಿ ಆಕೆಯ ಗಂಡನ ಮನೆಯಲ್ಲೇ ವಾಸ, ದಾವಾ ಸ್ವತ್ತಿಗೆ ಬಂದು ಹೋಗುತ್ತಾರೆ. 14 ನೇ ಪ್ರತಿವಾದಿ ನನ್ನ ಅಣ್ಣ ಆತ ಹೆರ್ಗ ಗ್ರಾಮ, ಉಡುಪಿ ವಾಸ. 14 ನೇ ಪ್ರತಿವಾದಿ ಮದುವೆ ಆದ ನಂತರ ಸದರಿ ವಿಳಾಸದಲ್ಲಿ ವಾಸ. ದಾವಾ ಸ್ವತ್ತಿನಲ್ಲಿ ಯಾರೂ ಸಹ ಇರಲಿಲ್ಲ. ಸಾಕ್ಷಿ ಹಾಲಿ ನಾವು ಮನೆಯಲ್ಲಿ ಇದ್ದೇವೆ ಎಂದು ಸ್ವತಃ ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿರುವ ಮನೆ ಮೆಣ್ಕು ಶೆಟ್ಟಿ ಕಟ್ಟಿದ್ದು. ದಾವಾ ಸ್ವತ್ತಿ ಮನೆ ಮೆಣ್ಕು ಶೆಟ್ಟಿ ಕಟ್ಟಿಸಿದ್ದು ಎಂದು ತೋರಿಸಲು ದಾಖಲೆ ಇಲ್ಲ, ಆದರೆ ನಾನು ಮನೆ ಇದೆ ಎಂದು ಹೇಳುವುದನ್ನು ಹೊರತುಪಡಿಸಿ. ಸುಮಾರು 50 ವರ್ಷಗಳ ಹಿಂದೆ ದಾವಾ ಸ್ವತ್ತಿನಲ್ಲಿರುವ ಮನೆ ಕಟ್ಟಿರಬಹದು. ದಾವಾ ಸ್ವತ್ತಿನಲ್ಲಿರುವ ಮನೆ ಯಾರು ಕಟ್ಟಿದ್ದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

ಗೋಪಾಲ ಶೆಟ್ಟಿ ಗೇಣಿಯಾಗಿ ದಾವಾ ಸ್ವತ್ತನ್ನು ಪಡೆದುಕೊಂಡಿದ್ದು ಭೂ ಮಾಲೀಕರಿಗೆ ಗೇಣಿ ನೀಡುತ್ತಿದ್ದರು ಎಂದರೆ ಸರಿಯಲ್ಲ. ಗೇಣಿ ಎಂದರೆ ಒಂದು ವರ್ಷಕ್ಕೆ ಒಂದು ಕ್ವೊಲು ಜಾಗಕ್ಕೆ ಒಂದು ಮುಡಿ ಅಕ್ಕಿ ನೀಡುತ್ತಿದ್ದರು. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಗೇಣಿ ನೀಡುತ್ತಿದ್ದರು. ಸದರಿ ಗೇಣಿ ಬಲ್ಲಾಳ ಎನ್ನುವವರಿಗೆ ನೀಡುತ್ತಿದ್ದರು, ಆದರೆ ನಿಖರವಾಗಿ ಗೊತ್ತಿಲ್ಲ. ದಾವಾ ಸ್ವತ್ತಿಗಳಿಗೆ ಸಂಬಂದಿಸಿದಂತೆ ಬಲ್ಲಾಳರೊಬ್ಬರೇ ಭೂ ಮಾಲೀಕ. ನನ್ನ ಪ್ರಕಾರ ಸದರಿ ಬಲ್ಲಾಳರೊಬ್ಬರಿಗೆ ಮಾತ್ರ ಗೇಣಿ ಕೊಡುತ್ತಿದ್ದುದು. ಸದರಿ ಗೇಣಿಯನ್ನು ಮಾಲೀಕರಿಗೆ ಕೊಂಡು ಹೋಗಿ 7 ನೇ ಪ್ರತಿವಾದಿ, 4 ನೇ ಪ್ರತಿವಾದಿ ಮತ್ತು 1 ನೇ ವಾದಿ ಕೊಡುತ್ತಿದ್ದರು. 1 ನೇ ವಾದಿ, 4 ಮತ್ತು 7 ನೇ ಪ್ರತಿವಾದಿಗಳು ಮಾಲೀಕರಿಗೆ ಗೇಣಿ ಕೊಂಡು ನೀಡುತ್ತಿದ್ದರು ಎಂದು ತೋರಿಸಲು ಯಾವುದೇ ರಶೀದಿ, ಪುರಾವೆ ಇಲ್ಲ. ಪಹಣಿ ಮಾತ್ರ. ಪಹಣಿಯಲ್ಲಿ ದಾವಾ ಸ್ವತ್ತಿನ ಗೇಣಿದಾರರಾಗಿದ್ದೆವು ಎಂದು ತೋರಿಸುವ ಬಗ್ಗೆ ಕಂಡು ಬರುವುದಿಲ್ಲ. ದಾವಾ ಸ್ವತ್ತುಗಳನ್ನು ನಾವಾಗಲಿ, ಮೆಣ್ಕು ಆಗಲಿ ಗೇಣಿ ಪಡೆದು ಕೊಂಡಿದ್ದರು ಎಂದು ತೋರಿಸಲು ಗೇಣಿ ರಶೀದಿ ಇರುತ್ತದೆ, ಹಾಜರು ಮಾಡಬಹುದು. ಸದರಿ ಗೇಣಿ ರಶೀದಿ ಹಾಜರು ಮಾಡಲು ಸಮಸ್ಯೆ ಇರಲಿಲ್ಲ ಮತ್ತು ಇಲ್ಲ.

ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಭೂ ನ್ಯಾಯ ಮಂಡಳಿಗೆ ಭೂ ಮಂಜೂರಾಗಿ ಗೇಣಿ ಕೋರಿ ಉದ್ಘೋಷಣೆ ಮಾಡಬೇಕು ಎಂದು ನಮೂನೆ-7 ರನ್ನು ಸಲ್ಲಿಸಿದ್ದೇನೆ. ಸದರಿ ಅರ್ಜಿ ನಾನು ನೀಡಿದ್ದು, ಬೇರೆ ಯಾರು ನೀಡಿದ್ದಾರೆ ಗೊತ್ತಿಲ್ಲ. ಭೂ ನ್ಯಾಯ ಮಂಡಳಿಯಲ್ಲಿ ನಾನು ಹಾಜರಾಗಿ ಸಾಕ್ಷ್ಯ ನುಡಿದಿಲ್ಲ. ಭೂ ನ್ಯಾಯ ಮಂಡಳಿಯಲ್ಲಿ ಅರ್ಜಿ ಮತ್ತು ಸಾಕ್ಷ್ಯ ನೀಡಿದ್ದು ಯಾರು ಎಂದರೆ ನನ್ನ ತಾಯಿ ಮೆಣ್ಣು ಶೆಟ್ಟಿ, ಗೊಪಾಲ ಶೆಟ್ಟಿ, ಶಂಕರ ಶೆಟ್ಟಿ. ಭೂ ನ್ಯಾಯ ಮಂಡಳಿಯಲ್ಲಿ ನನ್ನ ತಾಯಿ, ಗೊಪಾಲ ಶೆಟ್ಟಿ, ಶಂಕರ ಶೆಟ್ಟಿ ಅರ್ಜಿ ಮತ್ತು ಸಾಕ್ಷ್ಯ ನೀಡುವ ಕಾಲಕ್ಕೆ ಅಳಿಯ ಕಟ್ಟಿನಡಿ

ಬರುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಅಳಿಯ ಕಟ್ಟಿನಡಿ ನಾವು ಬರುತ್ತೇವೆ ಎಂಬ ಬಗ್ಗೆ ನಿಪಿ.1 ರಲ್ಲಿ ಕಂಡು ಬರುತ್ತದೆ.

ದಾವಾ ಸ್ವತ್ತು ಒಟ್ಟು ಮೂರುವರೆ ಎಕರೆ ವಿಸ್ತೀರ್ಣ ಇರುತ್ತದೆ. ಸದರಿ ಮೂರಾವರೆ ಎಕರೆ ಸಂಪೂರ್ಣ ಗದ್ದೆ. ದಾವಾ ಶೆಡ್ಯೂಲ್ ನ ಯಾವ ಸರ್ವೆ ನಂಬ್ರದಲ್ಲಿ ಮನೆ ಬರುತ್ತದೆ ಗೊತ್ತಿಲ್ಲ. ಯಾವ ಸರ್ವೆ ನಂಬ್ರದಲ್ಲಿ ಮನೆ ಬರುತ್ತದೆ ಹೇಳಲು ಆಗುವುದಿಲ್ಲ. ದಾವಾ ಸರ್ವೆ ನಂಬ್ರಗಳೆಲ್ಲಾ ಸ್ವರ್ಣ ನದಿ ಹೊಳೆ ದಂಡೆಯಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಹಾಲಿ ಏನೂ ಬೆಳೆ ಇಟ್ಟಿಲ್ಲ. ಎರಡು ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ಏನು ಬೆಳೆ ಇಟ್ಟಿಲ್ಲ. ದಾವೆ ದಾಖಲೆ ಮಾಡಿದ ದಿನದಿಂದ ಈವರೆಗೂ ದಾವಾ ಸ್ವತ್ತಿನಲ್ಲಿ ಯಾವುದೇ ಕೃಷಿ ಮಾಡಿಲ್ಲ. ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತೇವೆ, ಆದರೆ ಕೃಷಿ ಮಾಡದೇ ಮೂರು ವರ್ಷ ಆಗಿದೆ. ಹಾಲಿ ದಾವಾ ಸ್ವತ್ತಿನ ಮನೆಯಲ್ಲಿ 1 ನೇ ವಾದಿ, 4 ಮತ್ತು 7 ನೇ ಪ್ರತಿವಾದಿಗಳು ಖಾಯಂ ಆಗಿ ವಾಸ ಇದ್ದಾರೆ. ಈಗ್ಗೆ 30 ವರ್ಷಗಳ ಹಿಂದಿನಿಂದ ದಾವಾ ಮನೆಯಲ್ಲಿ ಖಾಯಂ ಆಗಿ ವಾಸ ಇದ್ದೇವೆ. ದಾವಾ ಸ್ವತ್ತುಗಳಲ್ಲಿ ಮಿಣ್ಣು ಶೆಟ್ಟಿಯ ಎಲ್ಲಾ ಮಕ್ಕಳಿಗೆ ಸಮಭಾಗ ಆಗಬೇಕು ಎಂದು ಕೇಳುತ್ತೀರಾ ಎಂದರೆ ಸಾಕ್ಷಿ ಅಳಿಯ ಕಟ್ಟಿನ ಆಧಾರದ ಕಾನೂನಿನಂತೆ ಆಗಬೇಕು ಎಂದು ನುಡಿಯುತ್ತಾರೆ. ಅಳಿಯ ಕಟ್ಟಿನ ಸಂಪ್ರದಾಯ ಆಚರಣೆ ಮಾಡುತ್ತೇವೆ ಎಂದು ತೋರಿಸಲು ದಾಖಲೆ ಇಲ್ಲ. ದಾವಾ ಸ್ವತ್ತುಗಳು ಅಳಿಯ ಸಂತಾನ ಕಟ್ಟಿನಡಿ ಬರುತ್ತದೆ ಎಂದು ತೋರಿಸಲು ದಾಖಲೆ ಇಲ್ಲ.

ದಾವಾ ಸ್ವತ್ತುಗಳ ಪಹಣಿ ಮಿಣ್ಕು ಶೆಟ್ಟಿ ಮತ್ತು ಆಕೆಯ ಹೆಸರಿನಲ್ಲಿ ಇರುತ್ತದೆ. ಸದರಿ ಪಹಣಿಗಳು 1 ರಿಂದ 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಇವೆ. ಈಗ್ಗೆ 3 ವರ್ಷಗಳ ಹಿಂದೆ ಸದರಿ ಪಹಣಿ ಯಾರ ಹೆಸರಿನಲ್ಲಿ ಇದೆ ಎಂಬ ಬಗ್ಗೆ ತಿಳಿದುಬಂತು. ಸದರಿ ಪಹಣಿ ನಮೂದುಗಳನ್ನು ನಾನು ಪ್ರಶ್ನಿಸಿಲ್ಲ. ಸದರಿ ಪಹಣಿ ನಮೂದು ಯಾವ ಆಧಾರದ ಮೇಲೆ 1 ರಿಂದ 3 ನೇ ಪ್ರತಿವಾದಿ ಮಾಡಿಸಿಕೊಂಡಿದ್ದಾರೆ, ಆ ಬಗ್ಗೆ ಅವರಿಗೆ ಗೊತ್ತು, ನನಗೆ ಏನು ಗೊತ್ತು. ಭೂ ನ್ಯಾಯ ಮಂಡಳಿ ಆದೇಶ ನಿಮಗೆ ತಿಳಿಯುತ್ತದಾ ಎಂದರೆ ಸಾಕ್ಷಿ ಸುಮ್ಮನೆ ತಲೆ ತಿಗ್ಗಿಸಿ ನಿಂತಿರುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿರುತ್ತದೆ. ಕಾರಣ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.